ದಿನಾಂಕ 23.10.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 4ನೇ ಪ್ರತಿವಾದಿಯರ ಪರ ಶ್ರೀ. ಎ.ಎಸ್.ಕೆ ವಕೀಲರಿಂದಃ

ನಾನು ನೆಲ್ಯಾಡಿಯಲ್ಲಿ ಜನಿಸಿರುತ್ತೇನೆ. ನನ್ನ ತಂದೆ ತಾಯಿಯರ ಮನೆ ಪುಂಜಾಲಕಟ್ಟೆಯಲ್ಲಿರುತ್ತದೆ. ನೆಲ್ಯಾಡಿಯಲ್ಲಿ ನನ್ನ ಅಜ್ಜಿಯ ಮನೆ ಇರುತ್ತದೆ. ನನ್ನ ಜನನ ಪ್ರಮಾಣ ಪತ್ರ ನೆಲ್ಯಾಡಿಗೆ ಸೇರಿದ್ದಾಗಿರುತ್ತದೆ. ನನ್ನ ಜನನದ ಸಂದರ್ಭದಲ್ಲಿ ನನ್ನ ತಂದೆ ತಾಯಿಯರು ಕುಕ್ಕಳ ಗ್ರಾಮದ ಪುಂಜಾಲಕಟ್ಟೆಯಲ್ಲಿ ವಾಸವಿದ್ದರು. ನಾನು ಸುಮಾರು 10 ವರ್ಷಗಳಿಂದ ನೆಲ್ಯಾಡಿಯಲ್ಲಿ ವಾಸವಿದ್ದು, ನನ್ನ ತಾಯಿ ನನ್ನೊಟ್ಟಿಗೆ ವಾಸವಿರುವುದಿಲ್ಲ, ಎಲ್ಲಿದ್ದಾರೆ ಎಂಬುದು ಸಹ ನನಗೆ ಗೊತ್ತಿಲ್ಲ. ನಾನು 1 ರಿಂದ ಪಿ.ಯು.ಸಿ ಯವರೆಗೆ ಪುಂಜಾಲಕಟ್ಟೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು, ಡಿಗ್ರಿ ವಿದ್ಯಾಭ್ಯಾಸವನ್ನು ನೆಲ್ಯಾಡಿಯಲ್ಲಿ ಮುಗಿಸಿರುತ್ತೇನೆ. ಪಿ.ಯು.ಸಿ ವಿದ್ಯಾಭ್ಯಾಸವನ್ನು 2013-14 ರಲ್ಲಿ ಮುಗಿಸಿರುತ್ತೇನೆ. ಡಿಗ್ರಿ ವಿದ್ಯಾಭ್ಯಾಸವನ್ನು 2017 ರಲ್ಲಿ ಮುಗಿಸಿರುತ್ತೇನೆ. ನನ್ನ ಆಧಾರ್ ಕಾರ್ಡಿನಲ್ಲಿ 2013 ರಿಂದ ವಿಳಾಸವು ನೆಲ್ಯಾಡಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಪಡಿತರ ಚೀಟಿ ನೆಲ್ಯಾಡಿಗೆ ಸೇರಿದ್ದಾಗಿದ್ದು, ನನ್ನ ಮಾವನವರ ರೇಷನ್ ಕಾರ್ಡಿನಲ್ಲಿ ಅಜ್ಜಿ ಗೌರಿ, ಮಾವ ಆನಂದ, ಇನ್ನೊಬ್ಬ ಮಾವ ಶೇಖರ, ಇಬ್ಬರು ಅತ್ತೆಯಂದಿರ ಹೆಸರು ಹಾಗೂ ಇತರರ ಹೆಸರು ಇರುತ್ತದೆ. ಪುಂಜಾಲಕಟ್ಟೆಯ ಮನೆಯಲ್ಲಿ ಯಾರೆಲ್ಲಾ ವಾಸವಿದ್ದರು ಎಂದರೆ ಸಾಕ್ಷಿ ನನ್ನ ತಾಯಿಯ ತಾಯಿ, ತಾಯಿ, ನಾನು ಮತ್ತು ಅಣ್ಣ ವಾಸವಿದ್ದೆವು. ನಾನು ಬಿ.ಕಾಂ ಪದವಿದರಿಯಾಗಿರುತ್ತೇನೆ.

2. ದಾವಾ ಸ್ವತ್ತುಗಳ ಸರ್ವೇ ನಂಬರ್ ಗಳು ಗೊತ್ತಾ ಎಂದರೆ ಹೌದು. ಸರ್ವೇ ನಂ. 127/5 ರಲ್ಲಿ 48 ಸೆಂಟ್ಸ್, ಸರ್ವೇ ನಂ. 127/6 ರಲ್ಲಿ 4 ಎಕರೆ, ಸರ್ವೇ ನಂ. 6/11 ರಲ್ಲಿ 8 ಸೆಂಟ್ಸ್ ಸರ್ವೇ ನಂ. 6/11 ರಲ್ಲಿ 1.15 ಎಕರೆ, ಸರ್ವೇ ನಂ. 51/1ಸಿ ರಲ್ಲಿ 15 ಸೆಂಟ್ಸ್ ಇರುತ್ತದೆ. ಈ ಜಾಗ ಮೂಲತಃ ಯಾರಿಗೆ ಸೇರಿದ್ದು ಮತ್ತು ಹೇಗೆ ಬಂದಿದ್ದು ಎಂದರೆ ಸಾಕ್ಷಿ ಮೂಲತಃ ನಮ್ಮ ಅಜ್ಜಿ ಬಾಬಕ್ಕ ರವರಿಗೆ ಸೇರಿದ್ದು, ಅವರಿಗೆ ಹೇಗೆ ಬಂದಿದೆ ಎಂಬುದು ನನಗೆ ಗೊತ್ತಿಲ್ಲ. ಬಾಬಕ್ಕ ಹೆಂಗಸು ತೀರಿ ಎಷ್ಟು ವರ್ಷ ಆಯಿತು ಗೊತ್ತಾ ಎಂದರೆ ಸಾಕ್ಷಿ ನಾನು ಹುಟ್ಟುವ ಪೂರ್ವದಲ್ಲೆ ತೀರಿದ್ದರು. ಬಾಬಕ್ಕ ಹೆಂಗಸು ರವರಿಗೆ 5 ಜನ ಮಕ್ಕಳು. ಬಾಬಕ್ಕ ಹೆಂಗಸಿಗೆ ಒಬ್ಬ ಗಂಡು ಮಗ, 4 ಜನ ಹೆಣ್ಣುಮಕ್ಕಳು ಇದ್ದರು. ಆ ಪೈಕಿ ನನ್ನ ತಂದೆ ಹಾಗೂ ರುಕ್ಮಿಣಿ ಎಂಬ ಮಗಳು ತೀರಿದ್ದಾರೆ. ನನ್ನ ತಂದೆಯವರು 1998 ರಲ್ಲಿ ಮರಣಹೊಂದಿರುತ್ತಾರೆ. ರುಕ್ಮಿಣಿ ಯವರು ಯಾವಾಗ ಮರಣಹೊಂದಿದ್ದಾರೆ ಗೊತ್ತಿಲ್ಲ. ನನ್ನ ತಂದೆಗೆ

ವಾರಸುದಾರರು ನನ್ನ ತಾಯಿ ಮತ್ತು ನಾವಿಬ್ಬರು ಮಕ್ಕಳು. ರುಕ್ಮಿಣಿಯವರಿಗೆ 5 ಜನ ಮಕ್ಕಳು, ಅವರ ಗಂಡ ತೀರಿದ್ದಾರೆ. ಬಾಬಕ್ಕ ಹೆಂಗಸಿಗೆ ಒಟ್ಟಿಗೆ ಎಷ್ಟು ಜಾಗ ಇತ್ತು ಗೊತ್ತಾ ಎಂದರೆ ಸಾಕ್ಷಿ ದಾವಾ ಸ್ವತ್ತುಗಳು ಮಾತ್ರ ಎಂದು ಹೇಳುತ್ತಾರೆ. ಬಾಬಕ್ಕ ಹೆಂಗಸು ಮೃತಪಟ್ಟ ನಂತರ ದಾವಾ ಸ್ವತ್ತಿನ ಎಲ್ಲಾ ಜಾಗಗಳು ಅವರ ಎಲ್ಲಾ ಮಕ್ಕಳಿಗೂ ಹೋಗಿರುತ್ತದೆ. ಬಾಬಕ್ಕ ಹೆಂಗಸು ಬದುಕಿದ್ದಾಗ ಅಥವಾ ಅವರು ಮೃತಪಟ್ಟ ನಂತರ ದಾವಾ ಸ್ವತ್ತುಗಳನ್ನು ಪಾಲು ಮಾಡಿಕೊಳ್ಳಲು ಯಾವುದಾದರೂ ದಾಖಲೆಗಳು ಆಗಿದೆಯಾ ಎಂದರೆ ಹೌದು, ಯಾವಾಗ ಎಂದರೆ ಸಾಕ್ಷಿ 2014 ರಲ್ಲಿ ಎಂದು ಹೇಳುತ್ತಾರೆ. ಆ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ ಇಲ್ಲ. ಆ ರೀತಿ ಪಾಲು ಆಗುವಾಗ ನಿಮ್ಮ ತಂದೆ ಇದ್ದರಾ ಎಂದರೆ ಸಾಕ್ಷಿ ಜೀವಂತ ಇರಲಿಲ್ಲ ಎಂದು ಹೇಳುತ್ತಾರೆ. ಹಾಗಿದ್ದರೆ ಆ ಪಾಲುಪಟ್ಟಿಗೆ ನೀವಾಗಲಿ ನಿಮ್ಮ ತಾಯಿ ಅಥವಾ ಅಣ್ಣ ಆಗಲಿ ಸಹಿ ಮಾಡಿದ್ದೀರಾ ಎಂದರೆ  ಸಾಕ್ಷಿ ತಾಯಿ ಸಹಿ ಮಾಡಿರಬಹುದು ಎಂದು ಹೇಳುತ್ತಾರೆ. ಆ ಪಾಲುಪಟ್ಟಿಗೆ ನೀವು ಇವತ್ತಿನವರೆಗೆ ಆಕ್ಷೇಪ ಮಾಡಿದ್ದೀರಾ ಎಂದರೆ ಹೌದು. ಏನು ಆಕ್ಷೇಪ ಮಾಡಿದ್ದೀರಿ ಎಂದರೆ ಗೊತ್ತಿಲ್ಲ.

3. ದಾವಾ ಸ್ವತ್ತುಗಳು ಜಂಟಿಯಾಗಿ ಬಾಬಕ್ಕ ಹೆಂಗಸು ರವರ ಮಕ್ಕಳ ಹೆಸರಿನಲ್ಲಿ ಇತ್ತು. ಕೇಸಿನ ಜಾಗಗಳನ್ನು ಮಾರಾಟ ಮಾಡಿದ ವಿಚಾರ ಗೊತ್ತು. ಯಾವಾಗ ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನ್ನ ತಾಯಿ ಹಾಗೂ ಎಲ್ಲರೂ ಸೇರಿ ಮನೋಜ್ ಎಂಬುವವರಿಗೆ ಮಾರಾಟ ಮಾಡಿದ್ದಾರೆ. ಆ ಸಮಯದಲ್ಲಿ ದಾವಾ ಸ್ವತ್ತುಗಳ ಪೈಕಿ ನಿಮ್ಮ ತಾಯಿಯವರ ಸ್ವಾದೀನದಲ್ಲಿ ಎಷ್ಟು ಜಾಗಗಳು ಇದ್ದವು ಮತ್ತು ಬಾಬಕ್ಕ ಹೆಂಗಸು ರವರ ಮಕ್ಕಳ ಸ್ವಾದೀನದಲ್ಲಿ ಎಷ್ಟೆಷ್ಟು ಸ್ವತ್ತುಗಳು ಇದ್ದವು ಎಂದರೆ ಗೊತ್ತಿಲ್ಲ. ಬಾಬಕ್ಕ ಹೆಂಗಸಿನ ಮಕ್ಕಳು ಬೇರೆ ಬೇರೆ ಕೃಷಿ ಮಾಡುತ್ತಿದ್ದರಾ ಅಥವಾ ಒಟ್ಟಿಗೆ ಕೃಷಿ ಮಾಡುತ್ತಿದ್ದರಾ ಎಂದರೆ ಗೊತ್ತಿಲ್ಲ. ಬಾಬಕ್ಕ ಹೆಂಗಸು ರವರ ಉಳಿದ ಮಕ್ಕಳು ಎಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ದಾವಾ ಸ್ವತ್ತಿನಲ್ಲಿ ನನ್ನ ತಾಯಿ ಮಾತ್ರ ಇದ್ದರು ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ಮಾತ್ರ ಬಾಬಕ್ಕ ಹೆಂಗಸಿನ ಎಲ್ಲಾ ವಾರಸುದಾರರ ಹೆಸರಿನಲ್ಲಿ ಜಂಟಿಯಾಗಿತ್ತು. 2012 ರಲ್ಲಿ  ಎಲ್ಲರೂ ಸೇರಿ ಜಾಗವನ್ನು ಮಾರಾಟ ಮಾಡಬೇಕೆಂದು ತೀರ್ಮಾನಿಸಿದ್ದರು. ಒಂದು ವೇಳೆ ಪಾಲು ಆಗಿದ್ದರೆ ಒಬ್ಬೊಬ್ಬರಿಗೆ ಒಂದು ಎಕರೆ ಅಥವಾ ಅದಕ್ಕಿಂತ ಕಡಿಮೆ ಜಾಗ ಬರುತ್ತಿತ್ತು ಎಂದರೆ ಇಲ್ಲ. ಹಾಗಾದರೆ ಎಷ್ಟು ಬರುತ್ತದೆ ಎಂದರೆ ನನಗೆ ಅರ್ಧ ಸಿಗಬೇಕು ಎಂದು ಹೇಳುತ್ತಾರೆ. ಬಾಬಕ್ಕ ಹೆಂಗಸಿನ ಜಾಗದಲ್ಲಿಯಾ ಅಥವಾ ನಿಮ್ಮ ತಂದೆಗೆ ಬರಬೇಕಾದ ಸ್ವತ್ತಿನಲ್ಲಿಯಾ ಎಂದರೆ ಸಾಕ್ಷಿ ದಾವಾ ಶೆಡ್ಯುಲ್ ಸ್ವತ್ತಿನಲ್ಲಿ ಅರ್ಧಾಂಶ ನನಗೆ ಬರಬೇಕು ಎಂದು ಹೇಳುತ್ತಾರೆ. ದಾವಾ ಸ್ವತ್ತಿನಲ್ಲಿ ಎಷ್ಟು ಅಂಶದ ಪಾಲು ಸಿಗಬೇಕು ಎಂದು ಕೇಳಿದ್ದೀರಿ ಎಂದರೆ ಸಾಕ್ಷಿ ಅರ್ಧ ಅಂಶ ಸಿಗಬೇಕು ಎಂದು ಕೇಳಿದ್ದೇನೆ ಎಂದು

ಹೇಳುತ್ತಾರೆ. 15 ರಲ್ಲಿ 2 ಎಂದರೆ ಎಷ್ಟು ಅಂಶ ಬರುತ್ತದೆ ಎಂದರೆ ಸುಮಾರು 1/7 ನೇ ಅಂಶ ಎಂದರೆ ಸರಿ. ಅರ್ಧಾಂಶ ಬರಬೇಕು ಎಂದು ಹೇಳಿದವರು ದಾವೆಯಲ್ಲಿ 2/15 ನೇ ಅಂಶ ಬರಬೇಕು ಎಂದು ಕೇಳಲು ವಿಶೇಷ ಕಾರಣ ಇದೆಯಾ ಎಂದರೆ ಇಲ್ಲ. ಅರ್ಧಾಂಶದ ಹಕ್ಕು ಸಿಗಬೇಕೆಂದು ದಾವೆಯನ್ನು ದಾಖಲೆ ಮಾಡಿಲ್ಲ ಎಂದರೆ ಸರಿಯಲ್ಲ.

4. 2012 ರಲ್ಲಿ ಜಾಗವನ್ನು ಮಾರಾಟ ಮಾಡಲು ಯಾಕೆ ತೀರ್ಮಾನ ಮಾಡಿದ್ದರು ಎಂದರೆ ಸಾಕ್ಷಿ ಜಂಟಿಯಾಗಿದ್ದ ಕಾರಣ ಎಂದು ಹೇಳಿ ನಂತರ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡರೆ ಸಣ್ಣ ಸಣ್ಣ ಜಾಗಗಳು ಬರುತ್ತದೆ ಅದರಿಂದ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ಒಟ್ಟಿಗೆ ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೆ ಮಾಡಿಕೊಳ್ಳಬೇಕು ಎಂದು ಮಾತುಕತೆಯಾಗಿತ್ತು ಎಂದರೆ ಹೌದು. ಯಾವ ಆಧಾರದಲ್ಲಿ ದಾವಾ ಸ್ವತ್ತಿನಲ್ಲಿ 2/15 ಅಂಶ ಸಿಗಬೇಕು ಎಂದು ಕೇಳಿದ್ದೀರಿ ಎಂದರೆ ಗೊತ್ತಿಲ್ಲ. ಈ ದಾವಾ ಸ್ವತ್ತುಗಳು ಮಾರಾಟ ಆಗಿರುತ್ತವೆ. ಯಾವಾಗ ಆಗಿದೆ ಎಂದರೆ ಸಾಕ್ಷಿ 2014-15 ರಲ್ಲಿ ಹೇಳುತ್ತಾರೆ. ನಾನು 1997 ರಲ್ಲಿ ಜನಿಸಿರುತ್ತೇನೆ. ದಾವಾ ಸ್ವತ್ತು ಮಾರಾಟ ಆಗುವ ಮೊದಲು ದಾವಾ ಸ್ವತ್ತಿನಲ್ಲಿ ನನಗೆ ಎಷ್ಟು ಅಂಶದ ಹಕ್ಕು ಇತ್ತು ಎಂಬುದು ಸ್ಪಷ್ಟವಾಗಿ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಅರ್ಧ ಅಂಶ ಎಂದು ಹೇಳುತ್ತಾರೆ. ಕುಟುಂಬದೊಳಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಬೇಕು ಎಂದು ಯಾವಾಗ ತೀರ್ಮಾನ ಆಗಿದೆ ಎಂದರೆ ಸಾಕ್ಷಿ ನನ್ನ ತಾಯಿ ಮಾಡಿದ್ದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತಾಯಿ ಮಾಡಿದ ತೀರ್ಮಾನಕ್ಕೆ ನಿಮ್ಮನ್ನು ಬಿಟ್ಟು ಉಳಿದವರು ಎಲ್ಲರೂ ಒಪ್ಪಿದ್ದಾರಾ ಎಂದರೆ ಹೌದು. ಉಳಿದ ಎಲ್ಲಾ ಹಕ್ಕುದಾರರ ಒಪ್ಪಿಗೆಯ ಮೇರೆಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಹೌದು. ದಾವಾ ಸ್ವತ್ತುಗಳು ಒಟ್ಟಿಗೆ ಮಾರಾಟ ಆಗಿದೆಯಾ ಅಥವಾ ಬೇರೆ ಬೇರೆ ಮಾರಾಟ ಆಗಿದೆಯಾ ಎಂದರೆ ಒಟ್ಟಿಗೆ ಮಾರಾಟ ಆಗಿದೆ ಆದರೆ ಇಸವಿ ಗೊತ್ತಿಲ್ಲ ಎಂದು ಹೇಳುತ್ತಾರೆ.

(ಈ ಹಂತದಲ್ಲಿ 1 ಮತ್ತು 4ನೇ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು

(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ